## ಧರೆಗಿಳಿದ ನಕ್ಷತ್ರಲೋಕ

ಯಲ್ಲಾಪುರದ ಉಮ್ಮಚಗಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಸುಮೇರು ಜ್ಯೋತಿರ್ವನಂನಲ್ಲಿ ಈಚೆಗೆ 'ನಕ್ಷತ್ರ ಮಂಡಲ ದೀಪೋತ್ಸವ' ನಡೆಯಿತು. ಈ ದೀಪೋತ್ಸವವು ನಕ್ಷತ್ರಲೋಕವೇ ಧರೆಗಿಳಿದಂತೆ ಕಾಣುತ್ತಿತ್ತು. ವಿಶಾಲವಾದ ಜ್ಯೋತಿರ್ವನಂನಲ್ಲಿ ರಾಶಿ, ನಕ್ಷತ್ರ, ಗ್ರಹ, ವೃಕ್ಷಗಳ ಸಮೀಪದಲ್ಲಿ ಹಣತೆ ಹಚ್ಚಿ ಭೂಮಧ್ಯರೇಖೆ, ಸಂಕ್ರಾಂತಿ ವೃತ್ತ ಹಾಗೂ ಆಕಾಶದಲ್ಲಿ ಕಾಣುವ ನಕ್ಷತ್ರಗಳಂತೆ, ಗ್ರಹಗಳ ಆಕೃತಿಯಂತೆ, ಸಪ್ತರ್ಷಿ ಮಂಡಲದಂತೆ, ಧ್ರುವತಾರೆಯಂತೆ ಹಣತೆಯನ್ನು ಜೋಡಿಸಿ ದೀಪೋತ್ಸವ ಆಚರಿಸಲಾಯಿತು.

—ಅಂಜನ್ ಕಾಯ್ಕಿಣಿ, ಸಾಗರ







## ನೋಡಿದಿರಾ ರಾಶಿರಾಶಿ ಅಂಜುರವಾ...

ಚಿತ್ರದಲ್ಲಿ ಕಾಣುತ್ತಿರುವ ಅಂಜೂರದ ಮರ ಇರುವುದು ಕೇರಳದ ಕಾಲಟಿಯ ಶ್ರೀಆದಿಶಂಕರಾಚಾರ್ಯ ದೇವಾಲಯದ ಆವರಣದಲ್ಲಿ. ಮರದ ಬುಡವೇ ಕಾಣದಷ್ಟು ಗೊಂಚಲು ಗೊಂಚಲಾಗಿ ಕಾಯಿಗಳು ತುಂಬಿ ತೊನೆದಾಡುತ್ತಿವೆ. ದೇವಾಲಯಕ್ಕೆ ಭೇಟಿ ಕೊಡುವವರು, ಅಂಜೂರದ ಮರದ ಸುತ್ತ ಜನ ನಿಂತಿರುವುದನ್ನು ನೋಡಿಯೇ ಅತ್ತ ಧಾವಿಸುತ್ತಾರೆ. ಮರದ ಬುಡವನ್ನು ಕಾಯಿಗಳು ಆವರಿಸಿಕೊಂಡಿರುವುದನ್ನು ನೋಡಿ ಪುಳಕಿತರಾಗುತ್ತಿದ್ದಾರೆ.

—ಶಶಿರೇಖಾ ನಾಗೇಂದ್ರ, ತುಮಕೂರು

## ನೂರರ ಹರೆಯದ ಟ್ರ್ಯಾಕ್ಟರ್

ಕ್ಯಾಲಿಫೋರ್ನಿಯಾದ ಸ್ಯಾಂಟಾಕ್ರೂಜ್ ಪರ್ವತಸ್ತೋಮ ಪ್ರದೇಶದಲ್ಲಿರುವ 'ಆಂಟೋನಿಯೊ ಓಪನ್ ಸ್ಪೇಸ್ ಪ್ರಿಸರ್ವ್', ಈ ಭಾಗದ ಸಾರ್ವಜನಿಕ ಮನರಂಜನಾ ಪ್ರದೇಶಗಳ ಪೈಕಿ ಮಹತ್ವದ್ದು. ಇಲ್ಲಿನ ಉದ್ಯಾನದಲ್ಲಿ ಹಲವು ಪರಿಸರ ವ್ಯವಸ್ಥೆಗಳ ಮಾದರಿಗಳನ್ನು ಇರಿಸಿ, ಜಾಗೃತಿ ಮೂಡಿಸಲಾಗುತ್ತಿದೆ. ಇಲ್ಲಿನ ವಸ್ತುಪ್ರದರ್ಶನ ವಿಭಾಗದಲ್ಲಿ ಇರಿಸಿದ್ದ ಟ್ರ್ಯಾಕ್ಟರ್ ಪ್ರವಾಸಿಗರ ನೆಚ್ಚಿನ ಆಕರ್ಷಣೆಯಾಗಿತ್ತು. ಟ್ರ್ಯಾಕ್ಟರ್‌ನ ನೂರು ವರ್ಷಗಳ ಇತಿಹಾಸ ತಿಳಿದು ಆಶ್ಚರ್ಯಗೊಂಡೆ. ಮಕ್ಕಳಿಗಾಗಿಯೇ ಇಲ್ಲಿ ಉದ್ಯಾನ ಶಿಕ್ಷಣ, ಅರಣ್ಯ ಸಂರಕ್ಷಣೆ, ಬೇಸಿಗೆ ಶಿಬಿರಗಳಂತಹ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.

—ಎಸ್. ಪ್ರಭಾವತಿ, ಬೆಂಗಳೂರು

